Akashvani: Bangalore
National Bulletin In Kannada
01.02.2026 : 13.10hrs
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
01.02.2026 : 13.10hrs

****************

ಮುಖ್ಯಾಂಶಗಳು

೧. ಲೋಕಸಭೆಯಲ್ಲಿಂದು ೨೦೨೬-೨೭ ನೇ ಸಾಲಿನ ೫೩.೪೭ ಲಕ್ಷ ಕೋಟಿ ಮೌಲ್ಯದ ಆಯವ್ಯಯ ಮಂಡಿಸಿದ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್

೨. ಬಜೆಟ್‌ನಲ್ಲಿ ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗಾಗಿ ಹತ್ತು ಸಾವಿರ ಕೋಟಿ ರೂಪಾಯಿ ವೆಚ್ಚದಲ್ಲಿ ಎಸ್‌ಎಮ್‌ಇ ಗ್ರೋತ್ ಫಂಡ್ ಸ್ಥಾಪನೆಗೆ ಅವಕಾಶ

೩. ೨೦೪೭ರ ವಿಕಸಿತ ಭಾರತದೆಡೆಗಿನ ಪ್ರಯಾಣಕ್ಕೆ ಕೇಂದ್ರ ಬಜೆಟ್ ಅಡಿಪಾಯ- ಪ್ರಧಾನಿ ಅಭಿಮತ

೪. ಐಸಿಸಿ ೧೯ ವರ್ಷದೊಳಗಿನವರ ವಿಶ್ವಕಪ್ ಕ್ರಿಕೆಟ್; ಭಾರತದ ವಿರುದ್ಧ ಟಾಸ್ ಗೆದ್ದ ಪಾಕಿಸ್ತಾನ ಫೀಲ್ಡಿಂಗ್ ಆಯ್ಕೆ

****************

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಇಂದು ಲೋಕಸಭೆಯಲ್ಲಿ ೨೦೨೬-೨೭ನೇ ಸಾಲಿನ ಕೇಂದ್ರ ಆಯವ್ಯಯ ಮಂಡಿಸಿದರು. ಇದು ಅವರ ದಾಖಲೆಯ ಸತತ ೯ನೇ ಬಜೆಟ್ ಮಂಡನೆಯಾಗಿದೆ.

ತಮ್ಮ ಬಜೆಟ್ ಭಾಷಣದಲ್ಲಿ ಇದು ಯುವಶಕ್ತಿ ಆಧಾರಿತ ಬಜೆಟ್ ಎಂದು ಬಣ್ಣಿಸಿದ ಸಚಿವೆ ನಿರ್ಮಲಾ ಸೀತಾರಾಮನ್, "ಸರ್ಕಾರದ 'ಸಂಕಲ್ಪವು' ಬಡವರು, ಹಿಂದುಳಿದವರು ಮತ್ತು ಸೌಲಭ್ಯವಂಚಿತರ ಮೇಲೆ ಹೆಚ್ಚಿನ ಆದ್ಯತೆ ನೀಡುವುದಾಗಿದೆ ಎಂದರು.

ಮೇಘ ಪೂರ್ಣಿಮೆ ಮತ್ತು ಗುರು ರವಿದಾಸ್ ಜಯಂತಿಯ ಶುಭಾಶಗಳೊಂದಿಗೆ ಬಜೆಟ್ ಭಾಷಣವನ್ನು ಆರಂಭಿಸಿದ ವಿತ್ತ ಸಚಿವೆ, ಸ್ಥಿರತೆ, ಹಣಕಾಸಿನ ಶಿಸ್ತು, ಸುಸ್ಥಿರ ಬೆಳವಣಿಗೆ ಮತ್ತು ಹಣದುಬ್ಬರ ನಿಯಂತ್ರಣದೆಡೆಗೆ ಶಕ್ತವಾದ ಆರ್ಥಿಕತೆಯನ್ನು ಸಾಧಿಸುವಲ್ಲಿ ಭಾರತ ಸಕ್ರಿಯವಾಗಿದೆ ಎಂದು ತಿಳಿಸಿದರು.

ಕರ್ತವ್ಯ ಭವನದಲ್ಲಿ ಸಿದ್ಧಪಡಿಸಲಾದ ಮೊದಲ ಬಜೆಟ್ ಇದಾಗಿದೆ. ಇದು ೩ ಕರ್ತವ್ಯಗಳಿಂದ ಪ್ರೇರಿತವಾಗಿದ್ದು, ಆರ್ಥಿಕ ಬೆಳವಣಿಗೆಗಳನ್ನು ವೇಗಗೊಳಿಸಿ ಸುಸ್ಥಿರಗೊಳಿಸುವುದು, ಜನರ ಆಶೋತ್ತರಗಳನ್ನು ಈಡೇರಿಸಿ, ಅವರ ಸಾಮರ್ಥ್ಯ ವೃದ್ಧಿಸುವುದು ಹಾಗೂ 'ಸಬ್ ಕ ಸಾತ್, ಸಬ್ ಕ

ವಿಕಾಸ್' ದೃಷ್ಟಿಕೋನದಲ್ಲಿ ಎಲ್ಲರಿಗೂ ಸಂಪನ್ಮೂಲಗಳು ಹಾಗೂ ಅವಕಾಶಗಳ ಪ್ರವೇಶಗಳನ್ನು ಖಚಿತಪಡಿಸಿಕೊಳ್ಳುವುದಾಗಿದೆ.

ಉದ್ಯೋಗ ಸೃಷ್ಟಿ, ಕೃಷಿ ಉತ್ಪಾದಕತೆ, ಗೃಹಬಳಕೆ ವಸ್ತುಗಳ ಖರೀದಿ ಸಾಮರ್ಥ್ಯ ಮತ್ತು ಜನರಿಗೆ ಸಾರ್ವತ್ರಿಕ ಸೇವೆಗಳನ್ನು ಬೆಂಬಲಿಸಲು ಸರ್ಕಾರ ಸಮಗ್ರ ಸುಧಾರಣೆಗಳನ್ನು ಕೈಗೊಂಡಿದೆ. ಈ ಕ್ರಮಗಳು, ಸುಮಾರು ಶೇಕಡಾ ೭ ರಷ್ಟು ಹೆಚ್ಚಿನ ಬೆಳವಣಿಗೆಯ ದರವನ್ನು ನೀಡಿವೆ ಮತ್ತು ಬಡತನ ನಿರ್ಮೂಲನೆ ಹಾಗೂ ಜನರ ಜೀವನಮಟ್ಟವನ್ನು ಸುಧಾರಿಸುವಲ್ಲಿ ಗಣನೀಯ ಪ್ರಗತಿ ಸಾಧಿಸಲು ಸಹಾಯ ಮಾಡಲಿವೆ.

ಮುಂದಿನ ಐದು ವರ್ಷಗಳಲ್ಲಿ ಭಾರತವನ್ನು ಜೈವ ಔಷಧ ತಯಾರಿಕಾ ಕೇಂದ್ರವಾಗಿಸಲು ಸುಮಾರು ೧೦ ಸಾವಿರ ಕೋಟಿ ರೂಪಾಯಿ ವೆಚ್ಚದ ಬಯೋಫಾರ್ಮಾ ಶಕ್ತಿಯೋಜನೆ ಘೋಷಣೆ.

ಎಲೆಕ್ಟ್ರಾನಿಕ್ಸ್ ಘಟಕ ತಯಾರಿಕಾ ವೆಚ್ಚವನ್ನು ೨೨ ಸಾವಿರದ ೯೧೯ ಕೋಟಿಯಿಂದ ಪ್ರಸ್ತುತ ೪೦ ಸಾವಿರ ಕೋಟಿ ರೂಪಾಯಿಗೆ ಹೆಚ್ಚಿಸಲಾಗುವುದು. ಗಣಿಗಾರಿಕೆ, ಸಂಶೋಧನೆ, ಸಂಸ್ಕರಣೆ ಮತ್ತು ತಯಾರಿಕೆಗೆ ಉತ್ತೇಜನ ನೀಡಲು ಮೂರು ರಾಸಾಯನಿಕ ಪಾರ್ಕ್ ಸ್ಥಾಪಿಸಲು ನಿರ್ಧರಿಸಲಾಗಿದೆ.

ಐದು ವರ್ಷಗಳಿಗೆ ಮೀಸಲಾಗಿ ೧೦ ಸಾವಿರ ಕೋಟಿ ರೂಪಾಯಿ ವೆಚ್ಚದ ಕಂಟೈನರ್ ತಯಾರಿಕಾ ಯೋಜನೆಯನ್ನು ಘೋಷಿಸಲಾಗಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಖಾದಿ ಗ್ರಾಮೋದ್ಯೋಗ, ಕೈಮಗ್ಗ ಮತ್ತು ಕರಕುಶಲ ವಸ್ತುಗಳಿಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಮಹಾತ್ಮಾಗಾಂಧಿ ಗ್ರಾಮಸ್ವರಾಜ್ ಉಪಕ್ರಮವನ್ನು ಅವರು ಪ್ರಸ್ತಾಪಿಸಿದರು. ಇದು ತರಬೇತಿ, ಕೌಶಲ್ಯ, ಪ್ರಕ್ರಿಯೆ ಮತ್ತು ಉತ್ಪಾದನೆಯ ಗುಣಮಟ್ಟವನ್ನು ಸುಗಮಗೊಳಿಸಿ, ಬೆಂಬಲಿಸುತ್ತದೆ.

ಭೂಮಿಯೊಳಗಿನ ಅಪರೂಪದ ಶಾಶ್ವತ ಅಯಸ್ಕಾಂತೀಯ ಖನಿಜಗಳನ್ನು ಉತ್ತೇಜಿಸಲು, ಖನಿಜ ಸಮೃದ್ಧ ರಾಜ್ಯಗಳಾದ, ಒಡಿಶಾ, ಕೇರಳ, ಆಂಧ್ರಪ್ರದೇಶ ಮತ್ತು ತಮಿಳುನಾಡಿಗೆ ಮೀಸಲಾದ 'ಅಪರೂಪದ ಭೂಮೀಯ ಖನಿಜಗಳ ಕಾರಿಡಾರ್' ನಿರ್ಮಿಸಲು ಬೆಂಬಲ ಘೋಷಿಸಲಾಗಿದೆ.

ಭಾರತ ಸೆಮಿಕಂಡಕ್ಟರ್ ಮಿಷನ್ ೨.೦ ಅನ್ನು ೧೦ ಸಾವಿರ ಕೋಟಿ ರೂಪಾಯಿ ವೆಚ್ಚದಲ್ಲಿ ಪ್ರಾರಂಭಿಸಿ, ಅರೆವಾಹಕ ಉಪಕರಣಗಳನ್ನು ತಯಾರಿಸಿ ಪೂರೈಕೆ ಸರಪಳಿಯನ್ನು ಬಲಪಡಿಸಲಾಗುವುದು.

ಐದು ಲಕ್ಷಕ್ಕೂ ಹೆಚ್ಚು ಜನಸಂಖ್ಯೆ ಹೊಂದಿರುವ ೨ ಮತ್ತು ಮೂರನೇ ಹಂತದ ನಗರಗಳಲ್ಲಿ ಮೂಲ ಸೌಕರ್ಯವನ್ನು ಅಭಿವೃದ್ಧಿಪಡಿಸುವತ್ತ ಗಮನಹರಿಸಲು ಸಾರ್ವಜನಿಕ ಬಂಡವಾಳವನ್ನು ೧೨.೨ ಲಕ್ಷ ಕೋಟಿ ರೂಪಾಯಿಗಳಿಗೆ ಹೆಚ್ಚಿಸಲಾಗುವುದು.

ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗಾಗಿ ಹತ್ತು ಸಾವಿರ ಕೋಟಿ ರೂಪಾಯಿ ವೆಚ್ಚದಲ್ಲಿ ಎಸ್‌ಎಮ್‌ಇ ಗ್ರೋತ್ ಫಂಡ್ ಸ್ಥಾಪನೆ. ವಿದ್ಯುತ್, ಉಕ್ಕು, ಸಿಮೆಂಟ್, ಸಂಸ್ಕರಣಾಗಾರಗಳು, ಮತ್ತು

ರಾಸಾಯನಿಕಗಳಲ್ಲಿ ಕಾರ್ಬನ್ ಕ್ಯಾಪ್ಚರ್, ಬಳಕೆ ಮತ್ತು ಸಂಗ್ರಹಣೆಗೆ ಮುಂದಿನ ಐದು ವರ್ಷಗಳಲ್ಲಿ ೨೦ ಸಾವಿರ ಕೋಟಿ ರೂಪಾಯಿ ವಿನಿಯೋಗ.

ನಗರಗಳ ನಡುವಿನ ಆರ್ಥಿಕ ಬೆಳವಣಿಗೆಯ ಸಂಪರ್ಕಕ್ಕಾಗಿ ಏಳು ಅತಿವೇಗದ ರೈಲು ಕಾರಿಡಾರ್‌ಗಳನ್ನು ಅಭಿವೃದ್ಧಿಪಡಿಸಲಾಗುವುದು. ಮುಂಬೈ ನಿಂದ ಪುಣೆ, ಪುಣೆ-ಹೈದರಾಬಾದ್, ಹೈದರಾಬಾದ್-ಬೆಂಗಳೂರು, ಹೈದರಾಬಾದ್-ಚೆನ್ನೈ, ಚೆನ್ನೈ-ಬೆಂಗಳೂರು, ದೆಹಲಿ-ವಾರಾಣಸಿ ಮತ್ತು ವಾರಾಣಸಿಯಿಂದ ಸಿಲಿಗುರಿ ನಗರಗಳ ನಡುವೆ ರೈಲು ಕಾರಿಡಾರ್‌ಗಳನ್ನು ಅಭಿವೃದ್ಧಿಪಡಿಸಲಾಗುವುದು.

ದೇಶದಲ್ಲಿ ೨೫ ಕೋಟಿ ಜನರು ಬಹು ಆಯಾಮದ ಬಡತನದಿಂದ ಹೊರಬಂದಿದ್ದಾರೆ ಎಂದು ಸಚಿವರು ಮಾಹಿತಿ ನೀಡಿದರು.

ರೈತರು, ಮಹಿಳೆಯರು, ಯುವಕರು ಮತ್ತು ದಿವ್ಯಾಂಗರಿಗೆ ಹೊಸ ಅವಕಾಶಗಳನ್ನು ನೀಡುವ ಮೂಲಕ ಕೃತಕಬುದ್ಧಿಮತ್ತೆಯು ತಂತ್ರಜ್ಞಾನ ಆಧಾರಿತ ಮಹತ್ವವನ್ನು ಬಿಂಬಿಸಿದೆ.

ಶಿಕ್ಷಣದಿಂದ ಉದ್ಯೋಗಕ್ಕೆ ಒತ್ತು ನೀಡಲು ಉನ್ನತಮಟ್ಟದ ಸ್ಥಾಯಿಸಮಿತಿ ಮತ್ತು ಬ್ಯಾಂಕಿಂಗ್ ವಲಯವನ್ನು ಸಮಗ್ರವಾಗಿ ಪರಿಶೀಲಿಸಲು ವಿಕಸಿತ ಭಾರತಕ್ಕಾಗಿ ಉನ್ನತಮಟ್ಟದ ಬ್ಯಾಂಕಿಂಗ್ ಸಮಿತಿಯನ್ನು ರಚನೆ ಮಾಡಲಾಗುವುದು.

ಆನಿಮೇಷನ್, ವಿಜುವಲ್ ಎಫೆಕ್ಟ್ಸ್, ಗೇಮಿಗ್ಸ್ ಮತ್ತು ಕಾಮಿಕ್ಸ್ ಕ್ಷೇತ್ರಕ್ಕೆ ಬೆಂಬಲ. ಹೊಸ ರಾಷ್ಟ್ರೀಯ ವಿನ್ಯಾಸ ಸಂಸ್ಥೆ, ಪ್ರತಿಯೊಂದು ಜಿಲ್ಲೆಗೆ ಬಾಲಕೀಯರ ಹಾಸ್ಟೆಲ್, ಖಗೋಳ ವಿಜ್ಞಾನಕ್ಕಾಗಿ ದೂರದರ್ಶಕ ಸೌಲಭ್ಯಗಳ ಸ್ಥಾಪನೆಯನ್ನು ಘೋಷಿಸಲಾಗಿದೆ.

೨೦೨೬-೨೭ನೇ ಸಾಲಿನ ರಾಜಸ್ವ ಕೊರತೆ ಜಿಡಿಪಿಯ ಶೇಕಡಾ ೪.೩ ರಷ್ಟು ಇರಲಿದೆ.

ಆದಾಯ ತೆರಿಗೆ ಕಾಯ್ದೆ-೨೦೨೫, ೨೦೨೬ರ ಏಪ್ರಿಲ್ ೧ ರಿಂದ ಜಾರಿಗೆ ಬರಲಿದೆ.  ತೆರಿಗೆ ಸಲ್ಲಿಕೆ ಅವಧಿಯನ್ನು ವಿಸ್ತರಿಸಲಾಗಿದೆ. ಕ್ಯಾನ್ಸರ್‌ನ ೧೭ ಔಷಧಗಳ ಮೇಲಿನ ಮೂಲ ಕಸ್ಟಮ್ಸ್ ಸುಂಕಕ್ಕೆ ವಿನಾಯಿತಿ ನೀಡಲಾಗಿದೆ.

ಭಾರತವನ್ನು ವೈದ್ಯಕೀಯ ಪ್ರವಾಸೋದ್ಯಮದ ಕೇಂದ್ರವಾಗಿ ಉತ್ತೇಜಿಸಲು ಸರ್ಕಾರವು ಐದು ಪ್ರಾದೇಶಿಕ ವೈದ್ಯಕೀಯ ಕೇಂದ್ರಗಳಿಗೆ ಬೆಂಬಲ ನೀಡಲಿದೆ. ನುರಿತ ಆರೋಗ್ಯ ಸಿಬ್ಬಂದಿಯನ್ನು ತರಬೇತಿಗೊಳಿಸಲು ಮೂರು ಹೊಸ ಅಖಿಲ ಭಾರತ ಆಯುರ್ವೇದ ಸಂಸ್ಥೆಗಳನ್ನು ಸ್ಥಾಪಿಸಲಾಗುವುದು.

ಒಡಿಶಾದ ರಾಷ್ಟ್ರೀಯ ಜಲಮಾರ್ಗ ಐದರಿಂದ ಪ್ರಾರಂಭಿಸಿ, ಖನಿಜ ಸಮೃದ್ಧ ಪ್ರದೇಶಗಳಾದ ತಲ್ಚರ್ ಮತ್ತು ಅಂಗುಲ್ ಅನ್ನು ಸಂಪರ್ಕಿಸಲು ಮುಂದಿನ ೫ ವರ್ಷಗಳಲ್ಲಿ ೨೦ ರಾಷ್ಟ್ರೀಯ ಜಲಮಾರ್ಗಗಳ ನಿರ್ಮಾಣ. ಇದಲ್ಲದೆ ಒಳನಾಡಿನ ಜಲಮಾರ್ಗಗಳನ್ನು ಪೂರೈಸುವ ಹಡಗು ದುರಸ್ಥಿ ಪರಿಸರ ವ್ಯವಸ್ಥೆಯನ್ನು ವಾರಾಣಾಸಿ ಮತ್ತು ಪಾಟ್ನಾದಲ್ಲಿ ಸ್ಥಾಪಿಸಲಾಗುವುದು.

ಆತ್ಮನಿರ್ಭರ ಭಾರತಕ್ಕಾಗಿ ೨ ಸಾವಿರ ಕೋಟಿ ಮೀಸಲು, ಎಂ.ಎಸ್.ಎಂ.ಇ ವಲಯದ ಬಲವರ್ಧನೆಗೆ ಮತ್ತಷ್ಟು ಆದ್ಯತೆ.

೨೦೨೬-೨೭ರಲ್ಲಿ ಹಣಕಾಸಿನ ಕೊರತೆಯು ಪ್ರಸ್ತುತ ಹಣಕಾಸು ವರ್ಷದ ಶೇಕಡಾ ೪.೪ ಕ್ಕೆ ಹೋಲಿಸಿದರೆ, ಜಿಡಿಪಿಯ ಶೇಕಡಾ ೪.೩ ರಷ್ಟಾಗಲಿದೆ ಎಂದು ಅಂದಾಜಿಸಲಾಗಿದೆ. ಮುಂದಿನ ದಶಕದಲ್ಲಿ ಕ್ರೀಡಾ ವಲಯವನ್ನು ಪರಿವರ್ತಿಸಲು ಸರ್ಕಾರವು ಖೇಲೋ ಇಂಡಿಯಾ ಮಿಷನ್ ಅನ್ನು ಪ್ರಾರಂಭಿಸಲಿದೆ.

****************

೨೦೨೬-೨೭ರ ಬಜೆಟ್ ಅಂದಾಜಿನ ಪ್ರಕಾರ ಒಟ್ಟು ವೆಚ್ಚ ೫೩ ಲಕ್ಷದ ೪೭ ಸಾವಿರದ ೩೧೫ ಕೋಟಿಗಳಷ್ಟಿದೆ. ಇದರಲ್ಲಿ ಒಟ್ಟು ಬಂಡವಾಳ ವೆಚ್ಚ ೧೨ ಲಕ್ಷದ ೨೧ ಸಾವಿರದ ೮೨೧ ಕೋಟಿಗಳಷ್ಟಿದೆ.

ಪರಿಣಾಮಕಾರಿ ಬಂಡವಾಳ ವೆಚ್ಚ ೧೭ ಲಕ್ಷದ ೧೫ ಸಾವಿರದ ೫೨೩ ಕೋಟಿಗಳಾಗಿವೆ.

೨೦೨೬-೨೭ರ ಬಜೆಟ್‌ನಲ್ಲಿ ರಾಜ್ಯಗಳ ಪಾಲು, ಅನುದಾನ/ಸಾಲಗಳು ಮತ್ತು ಕೇಂದ್ರ ಪ್ರಾಯೋಜಿತ ಯೋಜನೆಗಳ ಅಡಿಯಲ್ಲಿ ಬಿಡುಗಡೆಗಳು ಇತ್ಯಾದಿಗಳ ವಿಕೇಂದ್ರೀಕರಣ ಸೇರಿದಂತೆ ರಾಜ್ಯಗಳಿಗೆ ವರ್ಗಾಯಿಸಲಾಗುತ್ತಿರುವ ಒಟ್ಟು ಸಂಪನ್ಮೂಲಗಳು ೨೫ ಲಕ್ಷದ ೪೩ ಸಾವಿರದ ೭೬೯ ಕೋಟಿಗಳಷ್ಟಿದ್ದು, ಇದು ೨೦೨೪-೨೫ರ ಹಣಕಾಸು ವರ್ಷದ ವಾಸ್ತವಿಕ ವೆಚ್ಚಕ್ಕಿಂತ ೩ ಲಕ್ಷದ ೭೮ ಸಾವಿರದ ೨೬೩ ಕೋಟಿಗಳ ಹೆಚ್ಚಳವನ್ನು ತೋರಿಸುತ್ತಿದೆ.

****************

೨೦೨೬-೨೦೨೭ರ ಬಜೆಟ್ ಅನ್ನು ಪ್ರಧಾನಿ ನರೇಂದ್ರ ಮೋದಿ ಅವರು ಐತಿಹಾಸಿಕ ಎಂದು ಬಣ್ಣಿಸಿದ್ದಾರೆ.

ವಿಡಿಯೋ ಸಂದೇಶದಲ್ಲಿ ಪ್ರಧಾನಿ, ಈ ಬಜೆಟ್ ೨೦೪೭ ರ ವೇಳೆಗೆ ದೇಶವು ವಿಕಸಿತ ಭಾರತ ಕಡೆಗೆ ಸಾಗುವ ಪ್ರಯಾಣಕ್ಕೆ ಅಡಿಪಾಯವಾಗಿದೆ. ಭಾರತದ ಸುಧಾರಣಾ ಎಕ್ಸ್‌ಪ್ರೆಸ್‌ಗೆ ಹೊಸ ಶಕ್ತಿ ಮತ್ತು ಹೊಸ ವೇಗವನ್ನು ಇದು ನೀಡುತ್ತದೆ. ೧೪೦ ಕೋಟಿ ಭಾರತೀಯರ ಆಕಾಂಕ್ಷೆಗಳನ್ನು ಪ್ರತಿಬಿಂಬಿಸುವ ಈ ಬಜೆಟ್ ಅನ್ನು ಯುವಶಕ್ತಿ ಬಜೆಟ್ ಎಂದು ಅವರು ಶ್ಲಾಘಿಸಿದ್ದಾರೆ.

ಧ್ವನಿ: ಪ್ರಧಾನಿ ನರೇಂದ್ರ ಮೋದಿ ( ೨೨ ಸೆಕೆಂಡ್ಸ್)

****************

ಜಿಂಬಾಬ್ವೆಯ ಬುಲವಾಯೋದಲ್ಲಿ ನಡೆಯುತ್ತಿರುವ ಐಸಿಸಿ ೧೯ ವರ್ಷದೊಳಗಿನವರ ವಿಶ್ವಕಪ್ ಕ್ರಿಕೆಟ್ ೨೦೨೬ ರ ಇಂದಿನ ಪಂದ್ಯದಲ್ಲಿ ಭಾರತ ತಂಡ, ಪಾಕಿಸ್ತಾನದ ವಿರುದ್ಧ ಕಣಕ್ಕಿಳಿದಿದೆ.

ಟಾಸ್ ಗೆದ್ದ ಪಾಕಿಸ್ತಾನ ತಂಡ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿದೆ.

ಮೊದಲು ಬ್ಯಾಟಿಂಗ್ ಮಾಡುತ್ತಿರುವ ಭಾರತ ಇತ್ತೀಚಿನ ವರದಿಯಂತೆ ೨೬ ಓವರ್‌ಗಳಲ್ಲಿ ೪ ವಿಕೆಟ್ ನಷ್ಟಕ್ಕೆ ೧೧೫ ರನ್ ಮಾಡಿ ಆಡುತ್ತಿದೆ.

********ಮುಕ್ತಾಯ*******